**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ. ಇವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:131ಕ್ಕೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ**

**ಪ್ರಶ್ನೆ:-**

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಧರ್ಮಪುರ ಹೋಬಳಿಯು ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ಗಡಿ ಭಾಗದಲ್ಲಿರುವುದರಿಂದ ನಮ್ಮ ರಾಜ್ಯದಲ್ಲಿನ ಶಾಲಾ ಕಾಲೇಜು ಬಡ ವಿದ್ಯಾರ್ಥಿಗಳು, ರೈತರು, ಕೂಲಿ ಕಾರ್ಮಿಕರು ಹಾಗೂ ಅತಿ ಹೆಚ್ಚು ಬಡ ಜನ ಸಾಮಾನ್ಯರು ದಿನ ನಿತ್ಯ 'ಧರ್ಮಪುರ-ಸಿರಾ' ತಾಲ್ಲೂಕು ಮಾರ್ಗಕ್ಕೆ, 'ಧರ್ಮಪುರ-ಚಳ್ಳಕೆರೆ' ತಾಲ್ಲೂಕು ಮಾರ್ಗಕ್ಕೆ ಹಾಗೂ 'ಧರ್ಮಪುರ-ಹಿರಿಯೂರು ತಾಲ್ಲೂಕು' ಮಾರ್ಗಕ್ಕೆ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ಸೌಕರ್ಯಗಳಿಲ್ಲದೆ ತುಂಬ ಅನಾನುಕೂಲ ಉಂಟಾಗಿ ಪರದಾಡುವಂತಾಗಿರುತ್ತದೆ. ಆದುದರಿಂದ, ಸದರಿ ಮಾರ್ಗಗಳಿಗೆ ಸಮಯಕ್ಕೆ ಅನುಗುಣವಾಗಿ ನಮ್ಮ ರಾಜ್ಯದ ಗಡಿ ಭಾಗದ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್‌ಗಳನ್ನು ಕೂಡಲೇ ನಿಯೋಜಿಸಬೇಕೆಂದು ಹಾಗೂ ಧರ್ಮಪುರ ಹೋಬಳಿಯಲ್ಲಿ ಹೊಸ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವನ್ನು ನಿರ್ಮಿಸಬೇಕೆಂದು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಧರ್ಮಪುರ ಹೋಬಳಿಯ ಶಾಲಾ ಕಾಲೇಜು ವಿದ್ಯಾರ್ಥಿಗಳು, ರೈತರು, ಕೂಲಿ ಕಾರ್ಮಿಕರು ಹಾಗೂ ಜನ ಸಾಮಾನ್ಯರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಸಿರಾ-ಧರ್ಮಪುರ-ಸಿರಾ ಮಾರ್ಗದಲ್ಲಿ 18 ದುಂಡು ಸುತ್ತುವಳಿಗಳು, ಹಿರಿಯೂರು-ಧರ್ಮಪುರ-ಹಿರಿಯೂರು ಮಾರ್ಗದಲ್ಲಿ 07 ದುಂಡು ಸುತ್ತುವಳಿಗಳ ಬಸ್ ಸೌಲಭ್ಯ ಕಲ್ಪಿಸಿದ್ದು, ಪ್ರತಿನಿತ್ಯ ನಿಯಮಿತವಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಬಸ್‌ಗಳ ವಿವರಗಳನ್ನು **ಅನುಬಂಧ-'ಅ'ರಲ್ಲಿ** ನೀಡಲಾಗಿದೆ. ಅಲ್ಲದೇ, ಸದರಿ ಮಾರ್ಗಗಳಲ್ಲಿ ಖಾಸಗಿ ವಾಹನಗಳು ಸಹ ಕಾರ್ಯಾಚರಣೆಯಲ್ಲಿರುತ್ತವೆ.

ಮುಂದುವರೆದು, ಚಳ್ಳಕೆರೆ-ಧರ್ಮಪುರ ಮಾರ್ಗವು ಸಮಗ್ರ ಪ್ರದೇಶ ಯೋಜನೆಗಿಂತ ಮೊದಲು ಖಾಸಗಿ ವಲಯವಾಗಿದ್ದು, ಹೆಚ್ಚಾಗಿ ಖಾಸಗಿ ಬಸ್ಸುಗಲು ಕಾರ್ಯಾಚರಣೆಯಲ್ಲಿರುತ್ತವೆ. ಸದರಿ ಮಾರ್ಗದಲ್ಲಿ ನಿಗಮದಿಂದ ಬಸ್ ಸೌಲಭ್ಯ ಕಲ್ಪಿಸಲು ಮಾರ್ಗ ಸಮೀಕ್ಷೆ ಕೈಗೊಂಡು, ಸಾರಿಗೆ ಪ್ರಾಧಿಕಾರದಿಂದ ಪರವಾನಗಿ ಪಡೆದು, ಬಸ್ ಸೌಲಭ್ಯ ಕಲ್ಪಿಸುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಮೇಲಿನಂತೆ ಆಚರಣೆಯಲ್ಲಿರುವ ನಿಗಮದ ಬಸ್‌ಗಳ ಸದುಪಯೋಗವನ್ನು ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿದ್ದು, ಇದು ಅವರ ಅವಶ್ಯಕತೆಗನುಗುಣವಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಧರ್ಮಪುರದಲ್ಲಿ ನಿಗಮದ ಬಸ್ ನಿಲ್ದಾಣ ನಿರ್ಮಿಸುವ ಸಲುವಾಗಿ ನಿಗಮದ ವಶದಲ್ಲಿ ಪ್ರಸ್ತುತ ಯಾವುದೇ ನಿವೇಶನದ ಲಭ್ಯತೆಯಿರುವುದಿಲ್ಲ ಹಾಗೂ 2025-26ನೇ ಸಾಲಿಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಮುಂದಿನ ದಿನಗಳಲ್ಲಿ, ನಿವೇಶನ ಹಾಗೂ ನಿಗಮದ ಆರ್ಥಿಕ ಪರಿಸ್ಥಿತಿ ಮತ್ತು ಅವಶ್ಯಕತೆಗನುಗುಣವಾಗಿ ಆದ್ಯತೆ ಮೇರೆಗೆ ಧರ್ಮಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣದ ಬಗ್ಗೆ ಪರಿಶೀಲಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಟಿಡಿ 98 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

| | | | | | ಅನುಬಂಧ-'ಅ' |
|---|---|---|---|---|---|
| ಕರಾರಸಾ ನಿಗಮದವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಿರುವ ವಿವರಗಳು | | | | | |
| ಮಾರ್ಗ:ಸಿರಾ-ಧರ್ಮಪುರ-ಸಿರಾ | | | | | |
| ಕ್ರಸಂ | ಘಟಕ | ಎಲ್ಲಿಂದ | ಎಲ್ಲಿಗೆ | ವಯಾ | ಶಿರಾ ನಿರ್ಗಮನ ಸಮಯ |
| 1 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 6:30 |
| 2 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 7:00 |
| 3 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 7:15 |
| 4 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 7:30 |
| 5 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 7:45 |
| 6 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 8:00 |
| 7 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 09:00 |
| 8 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 10:00 |
| 9 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 11:05 |
| 10 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 11:45 |
| 11 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 13:00 |
| 12 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 13:45 |
| 13 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 14:30 |
| 14 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 15:20 |
| 15 | ಸಿರಾ | ಸಿರಾ | ಧರ್ಮಪುರ | ಬೇವಿನಹಳ್ಳಿ | 16:00 |
| 16 | ಸಿರಾ | ಬೆಂಗಳೂರು | ಪರಶುರಾಂಪುರ | ಧರ್ಮಪುರ | 17:45 |
| 17 | ಚಳ್ಳಕೆರೆ | ಬೆಂಗಳೂರು | ಪರಶುರಾಂಪುರ | ಧರ್ಮಪುರ | 19:15 |
| 18 | ಸಿರಾ | ಸಿರಾ | ಗೊಲ್ಲಹಳ್ಳಿ | ಧರ್ಮಪುರ | 20:30 |

| ಮಾರ್ಗ:ಹಿರಿಯೂರು–ಧರ್ಮಪುರ–ಹಿರಿಯೂರು | | | | | |
|---|---|---|---|---|---|
| ಕ್ರ.ಸಂ | ಘಟಕ | ಎಲ್ಲಿಂದ | ಎಲ್ಲಿಗೆ | ವಯಾ | ಹಿರಿಯೂರು ನಿರ್ಗಮನ ಸಮಯ |
| 1 | ಚಿತ್ರದುರ್ಗ | ಹಿರಿಯೂರು | ಧರ್ಮಪುರ | ರಂಗೇನಹಳ್ಳಿ | 7:35 |
| 2 | ಪಾವಗಡ | ಹಿರಿಯೂರು | ಪಾವಗಡ | ಧರ್ಮಪುರ | 9:15 |
| 3 | ಚಿತ್ರದುರ್ಗ | ಹಿರಿಯೂರು | ಧರ್ಮಪುರ | ರಂಗೇನಹಳ್ಳಿ | 13:55 |
| 4 | ಪಾವಗಡ | ಹಿರಿಯೂರು | ಪಾವಗಡ | ಧರ್ಮಪುರ | 15:30 |
| 5 | ಚಿತ್ರದುರ್ಗ | ಹಿರಿಯೂರು | ಧರ್ಮಪುರ | ರಂಗೇನಹಳ್ಳಿ | 17:55 |
| 6 | ಚಿತ್ರದುರ್ಗ | ಹಿರಿಯೂರು | ಖಂಡೇನಹಳ್ಳಿ ಪಾಳ್ಯ | ಧರ್ಮಪುರ | 19:00 |
| 7 | ಚಿತ್ರದುರ್ಗ | ಹಿರಿಯೂರು | ಮದ್ದೇಹಳ್ಳಿ | ಧರ್ಮಪುರ | 19:45 |